		ಆರೋಗ್ಯ ಕೇಂದ್ರಗಳಿವೆ. ಮಾರ್ಗ ಸೂಚಿ ಪ್ರಕಾರ ಹಾಗೂ ಅವಶ್ಯಕತೆನಗನುಸಾರ ಪರಿಶೀಲಿಸಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೭೧೨ (೨೩೨೨)

ಸದಸ್ಯರ ಹೆಸರು : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಉತ್ತರಿಸುವ ಸಚಿವರು : ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ರಾಜ್ಯಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ/ಮೆತ್ತು ಮೆಟ್ರಿಕ್ – ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು ?	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ರಾಜ್ಯದಲ್ಲಿ ೧೨೦೭ ಮೆಟ್ರಿಕ್ ಪೂರ್ವ ಹಗೂ ೨೮೪ ಮೆಟ್ರಿಕ್ ನಂತರ ಹೀಗೆ ಒಟ್ಟು ೧೪೯೧ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ.
ಆ)	ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಗೆ ಹೊಸದಾಗಿ ಮೆಟ್ರಿಕ್ – ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗುವುದೇ?	ವಿದ್ಯಾರ್ಥಿನಿಲಯಗಳ ಬೇಡಿಕೆ, ಆಯವ್ಯಯ ಲಭ್ಯತೆ, ಆಧರಿಸಿ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.
ಇ)	ಹಾಗಿದ್ದಲ್ಲಿ ಯಾವ ಯವ ಸ್ಥಳಗಳಲ್ಲಿ ಸ್ಥಾಪನೆ ಮಾಡಲಾಗುವುದು?	ರಾಜ್ಯದ ಒಟ್ಟಾರೆ ಬೇಡಿಕೆಯ ಜೊತೆಯಲ್ಲಿ ಚಾಮರಾಜನಗರ ಜಿಲ್ಲೆಯ ಬೇಡಿಕೆಯನ್ನು ಸಹ

		ಪರಿಶೀಲಿಸಿ, ೨೦೦೭–೦೮ ನೇ ಸಾಲಿನಲ್ಲಿ ಆಯವ್ಯಯದ ಲಭ್ಯತೆಯನ್ನಾಧರಿಸಿ, ಚಾಮರಾಜನಗರ ಜಿಲ್ಲೆಗೆ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೭೧೩ (೨೩೨೪)

ಸದಸ್ಯರ ಹೆಸರು : ಶ್ರೀ ವಾಟಾಳ್ ನಾಗರಾಜ್
(ಚಾಮರಾಜನಗರ)

ಉತ್ತರಿಸುವ ಸಚಿವರು : ಶ್ರೀ ರಾವು ನಾಯಕ್
(ಪಶು ಸಂಗೋಪನೆ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ರಾಜ್ಯಾದ್ಯಂತ ಇರುವ ಪಶುಚಿಕಿತ್ಸಾ ಕೇಂದ್ರಗಳೆಷ್ಟು ?	ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ರಾಜ್ಯದಲ್ಲಿ ಒಟ್ಟು ೩೮೭೮ ಪಶುವೈದ್ಯಸಂಸ್ಥೆಗಳಿವೆ. ಚಾಮರಾಜನಗರ ಜಿಲ್ಲೆಯಲ್ಲಿ ೭೬ ಪಶುವೈದ್ಯ ಸಂಸ್ಥೆಗಳಿವೆ. ಅವುಗಳ ವಿವರ ಈ ಕೆಳಗಿನಂತೆ ಇದೆ :-

(೧)	ಪಶು ಆಸ್ಪತ್ರೆ	೦೭
(೨)	ಪಶುಚಿಕಿತ್ಸಾಲಯಗಳು	೨೩
(೩)	ಸಂಚಾರಿ ಪಶುಚಿಕಿತ್ಸಾಲಯಗಳು	೦೪
(೪)	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು	೨೯
(೫)	ಪ್ರಧಾನ ಗ್ರಾಮೀಣ ಯೋಜನೆ ಉಪಕೇಂದ್ರ	೧೨
(೬)	ಪ್ರಧಾನ ಗ್ರಾಮೀಣ ಯೋಜನೆ	೦೧
	ಒಟ್ಟು	೭೬